ಇಂಗ್ಲಿಷ್ ಮೂಲ: ಅಗಾಥ ಕ್ರಿಸ್ಟಿ
ಕನ್ನಡಕ್ಕೆ: ಅನು ಬೆಳ್ಳೆ

# ಜೋಡಿ ಸುಳಿವು

"ಆದರೆ ಎಲ್ಲಕ್ಕಿಂತಲೂ ಮಿಗಿಲಾಗಿ... ಪ್ರಚಾರವೇ ಇಲ್ಲ" ಮಾರ್ಕ್ಸ್ ಹಾರ್ಡ್‌ಮನ್ ಹದಿನಾಲ್ಕನೆ ಬಾರಿಗೆಂಬಂತೆ ಹೇಳಿದರು.

'ಪ್ರಚಾರ' ಎಂಬ ಪದ ಅವರ ಸಂಭಾಷಣೆಯುದ್ದಕ್ಕೂ ನಿರಂತರವಾಗಿ ಬರುತ್ತಿತ್ತು. ಹಾರ್ಡ್‌ಮನ್ ಕುಳ್ಳಗಿನ, ಗುಂಡಗಿನ, ಚಿಕಿತ್ಸೆಗೊಳಗಾದ ಕೈಗಳ ಮತ್ತು ದುಃಖಸೂಚಕ ಭಾವದ ಧ್ವನಿಯ ವ್ಯಕ್ತಿ. ಆತ ಶ್ರೀಮಂತ ಆದರೆ ಹೇಳಿಕೊಳ್ಳುವಷ್ಟು ಶ್ರೀಮಂತನಲ್ಲ. ಅವರ ಹವ್ಯಾಸ ಸಂಗ್ರಹಿಸುವುದು. ಹಳೆಯ ಜರತಾರಿ, ಹಳೆಯ ಹರಳು, ಪ್ರಾಚೀನ ಆಭರಣ ಇತ್ಯಾದಿಗಳನ್ನು ಸಂಗ್ರಹಿಸುತ್ತಿದ್ದರು. ಅವರು ಸಂಗ್ರಹಕಾರರ ಆತ್ಮವಾಗಿದ್ದರು. ನವನವೀನ ಅಥವಾ ಆಧುನಿಕ ವಸ್ತುಗಳು ಮಾರ್ಕ್ಸ್ ಹಾರ್ಡ್‌ಮನ್‌ರಿಗೆ ಆಗಿಬರುತ್ತಿರಲಿಲ್ಲ.

ಪೈರೆಟ್ ಮತ್ತು ನಾನು ತುರ್ತು ಕರೆಯನ್ನು ಮನ್ನಿಸಿ, ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಅಶಕ್ತರಾಗಿದ್ದ ಕುಳ್ಳಗಿನ ವ್ಯಕ್ತಿಯನ್ನು ನೋಡಲು ಬಂದಿದ್ದೆವು. ಆ ಸಂದರ್ಭದಲ್ಲಿ ಪೊಲೀಸರನ್ನು ಕರೆಸುವುದು ಆ ವ್ಯಕ್ತಿಗೆ ಸಮ್ಮತವಾಗಿರಲಿಲ್ಲ. ಇನ್ನೊಂದೆಡೆ ತನ್ನ ಸಂಗ್ರಹದಲ್ಲಿದ್ದ, ಕಳುವಾದ ಕೆಲವು ಹರಳುಗಳಿಗಾಗಿ ಅವರನ್ನು ಕರೆಸುವುದು ವ್ಯರ್ಥವೆಂದುಕೊಂಡಿದ್ದರು. ಅವರು ಪೈರೆಟ್‌ನನ್ನೇ ಅನುಸಂಧಾನಕ್ಕೆ ಕರೆದಿದ್ದರು.

"ಮಿಸ್ಟರ್ ಪೈರೆಟ್, ನನ್ನ ಪದ್ಮರಾಗ ಮತ್ತು ಪಚ್ಚೆ ನೆಕ್ಲೇಸ್, ಕೆಥರಿನ್ ಡಿ'ಮೆಡಿಸಿ ಅವರಿಗೆ ಸಂಬಂಧಿಸಿದ್ದು. ಓ! ನನ್ನ ಪಚ್ಚೆ ನೆಕ್ಲೇಸ್!"

"ಅದು ಕಳುವಾದದ್ದು ಹೇಗೇಂತ ನನಗೆ ವಿವರಿಸಬಹುದೇ?" ಪೈರೆಟ್ ಮೆತ್ತಗೆ ಒತ್ತಾಯಿಸಿದ.

"ನಾನು ವಿವರಿಸುವ ಪ್ರಯತ್ನ ಮಾಡುತ್ತೇನೆ. ನಿನ್ನೆ ಮಧ್ಯಾಹ್ನ ನಾನೊಂದು ಸಣ್ಣ ಟೀ ಪಾರ್ಟಿ ಕೊಟ್ಟೆ. ಒಂದು ರೀತಿ ಅನೌಪಚಾರಿಕವಾದ ಕೇವಲ ಅರ್ಧ ಡಜನ್ ಜನರಿರುವ ಒಂದು ಪಾರ್ಟಿ. ಇಂತಹ ಒಂದೆರಡು ಪಾರ್ಟಿಗಳನ್ನು ಈ ಮೊದಲೇ ಕೊಟ್ಟಿದ್ದೆ. ಆದರೆ ಅವು ಯಶಸ್ವಿಯಾಗಿವೆಯೆಂದಲ್ಲ. ಒಳ್ಳೆಯ ಸಂಗೀತ ಕಾರ್ಯಕ್ರಮವನ್ನು ನಕೋರ, ಪಿಯಾನೋ ನುಡಿಸುವ ಕ್ಯಾಥರಿನ್ ಬರ್ಡ್ ಮತ್ತು ಆಸ್ಟ್ರೇಲಿಯಾದ ಹೆಣ್ಣಿನ ಸ್ವರದಲ್ಲಿ ಹಾಡುವ ಗಾಯಕರ ಉಪಸ್ಥಿತಿಯಲ್ಲಿ – ದೊಡ್ಡ ಸ್ಟುಡಿಯೊದಲ್ಲಿ ನಡೆಸಲಾಗಿತ್ತು. ಇರಲಿ, ಮಧ್ಯಾಹ್ನದ ಹೊತ್ತಿಗೆ ನನ್ನ ಅತಿಥಿಗಳಿಗೆ ಗೋಡೆಗೆ ಸೇರಿಸಿದ್ದ ಖಾನೆಗಳುಳ್ಳ ಸಣ್ಣಗಿನ ತಿಜೋರಿಯಲ್ಲಿ ಬಣ್ಣಬಣ್ಣದ ವೆಲ್ವೆಟ್ ಬಟ್ಟೆಯಲ್ಲಿಟ್ಟಿದ್ದ ನನ್ನ ಆಭರಣಗಳ ಮತ್ತು ಹರಳುಗಳ ಸಂಗ್ರಹವನ್ನು ತೋರಿಸುತ್ತಿದ್ದೆ. ಆ ಬಳಿಕ ನಾವೆಲ್ಲ ಸಂಗೀತ ಕೇಳಲು ಸ್ಟುಡಿಯೊಗೆ ಹೊರಟೆವು.